ಮೇ ತಿಂಗಳಿನಲ್ಲಿ ಗಾಳಿ ಪ್ರಾರಂಭವಾಗಿಬಿಟ್ಟರೆ ಏನಾಗುತ್ತದೋ ಎಂಬ ಭೀತಿ ನಮ್ಮ ಕಡೆ ಬಂದು ಬಿಡುತ್ತದೆ. ಅದಕ್ಕೆ ಉತ್ತರವನ್ನು ಹೇಳುವ ಸ್ಥಿತಿಯನ್ನು ನಿರ್ಮಾಣ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಇಂದೇ ಮಾಡಿಸುತ್ತೇನೆ. ಇವತ್ತೇ ಉಪನಿರ್ದೇಶಕರು, ತುಮಕೂರು ಮತ್ತು ಸಂಬಂಧಪಟ್ಟ ಡಿ.ಸಿ.ಯವರನ್ನು ಕಳುಹಿಸಿ ಅಲ್ಲಿ ಏನೇನು ತೆಂಗಿನ, ಅಡಿಕೆ, ಬಾಳೆ ಮರಗಳ ನಾಶವಾಗಿದೆ ಅದರ ಬಗ್ಗೆ ವರದಿ ತರಿಸುತ್ತೇನೆ. ಅದಕ್ಕೆ ಪರಿಹಾರವನ್ನು ಕೊಡಲು ಇಲಾಖೆಯಲ್ಲಿ ಅವಕಾಶವಿದೆ. ಎಷ್ಟು ಪರಿಹಾರವನ್ನು ಕೊಡಬೇಕು ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಛ) ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನ ಕೆ.ಎನ್.ಸುಬ್ಬರಾವ್ ಎನ್ನತಕ್ಕ ಗುಮಾಸ್ತನ ಸತ್ಯಾಗ್ರಹ.

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ಕೆ.ಎನ್.ಸುಬ್ಬರಾವ್ ಎನ್ನತಕ್ಕ ಒಬ್ಬ ಗುಮಾಸ್ತ ಕಳೆದ ಹತ್ತು ಹನ್ನೆರಡು ದಿವಸದಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರದವರು ಮತ್ತು ಅಲ್ಲಿನ ಆಡಳಿತ ಮಂಡಳಿಯವರು ಅವರ ಬಗ್ಗೆ ಏನನ್ನೂ ಇದುವರೆಗೆ ಕೇಳಿಲ್ಲ. ಅವನು ಹಣವನ್ನು ದುರುಪಯೋಗ ಮಾಡಿದ್ದಾನೆ ಎನ್ನತಕ್ಕ ಕಾರಣದ ಮೇಲೆ ಕೆಲಸದಿಂದ ವಜಾ ಮಾಡಿದ್ದಾರೆ. ನನಗೆ ಸಿಗತಕ್ಕ ಸೌಲಭ್ಯಗಳನ್ನು ಕೊಟ್ಟರೆ ಸಾಕು ಎಂದು ಆ ವ್ಯಕ್ತಿ ಬೇಡಿಕೆಯನ್ನಿಟ್ಟು ಸತ್ಯಾಗ್ರಹ ಮಾಡುತ್ತಿದ್ದಾನೆ. ಇದುವರೆಗೆ ಅವನ ಬಗ್ಗೆ ಯಾರೂ ವಿಚಾರಣೆ ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ನಿರ್ದೇಶನವನ್ನು ಜಿಲ್ಲಾ ಸಹಕಾರಿ ಬ್ಯಾಂಕ್‌ನ ಆಡಳಿತ ಮಂಡಳಿಯವರಿಗೆ ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ಸಂಬಂಧಪಟ್ಟ ಸಚಿವರ ಜೊತೆ ಚರ್ಚೆ ಮಾಡಿ ಸೂಕ್ತ ಪರಿಹಾರವನ್ನು ಒದಗಿಸಿಕೊಡುತ್ತೇವೆ.

ಜ) ಸಣ್ಣ ಉಳಿತಾಯ ಯೋಜನೆಗೆ ಪ್ರೋತ್ಸಾಹ ಧನ ನೀಡದೇ ಇರುವುದು.

ಶ್ರೀ ಕೆ.ಜಯರಾಮ್ ಶೆಟ್ಟಿ (ಉಳ್ಳಾಲ): ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ಸಣ್ಣ ಉಳಿತಾಯ ಯೋಜನೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಇತ್ತೀಚೆಗೆ ಸಣ್ಣ ಉಳಿತಾಯ ಖಾತೆದಾರರು ಐದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಡಿಪಾಸಿಟ್ ಮಾಡಿದರೆ ಅವರಿಗೆ ತಕ್ಷಣ ಎರಡು ಪರ್‌ಸೆಂಟ್ ಇನ್‌ಸೆನ್‌ಟೀವ್

ಬಡ್ಡಿಯನ್ನು ಕೊಡುವುದಾಗಿ ಘೋಷಣೆ ಮಾಡಿದ್ದರು. ಆದರೆ ಮಂಗಳೂರಿನಲ್ಲಿನ ರಥ ಬೀದಿ ಸಣ್ಣ ಉಳಿತಾಯ ಕಛೇರಿಯಲ್ಲಿ ಕಳೆದ ಮೂರು ವರ್ಷಗಳಿಂದ ಈ ರೀತಿ ಐದು ಸಾವಿರಕ್ಕಿಂತ ಹೆಚ್ಚು ಹಣವನ್ನು ಡಿಪಾಜಿಟ್ ಮಾಡಿದವರಿಗೆ ಇದುವರೆಗೆ ಇನ್‌ಸೆಂಟಿವ್ ಬಡ್ಡಿಯನ್ನು ಕೊಟ್ಟಿಲ್ಲ. ಅಲ್ಲಿ ಸುಮಾರು ಅರವತ್ತು ಸಾವಿರದವರೆಗೆ ಈ ರೀತಿಯಾದ ಖಾತಾದಾರರು ಇದ್ದಾರೆ. ಪ್ರತಿವರ್ಷ ಆದಾಯ ತೆರಿಗೆಯಲ್ಲಿ ಹತ್ತು ಸಾವಿರ ರಿಬೇಟ್ ತೆಗೆದುಕೊಳ್ಳುವ ಉದ್ದೇಶದಿಂದ ಆ ರೀತಿ ಮಾಡುತ್ತಿದ್ದಾರೆ. ಆ ಕಛೇರಿಯಲ್ಲಿ ಒಬ್ಬರು ಅಸಿಸ್ಟೆಂಟ್ ಡೈರೆಕ್ಟರ್, ಗುಮಾಸ್ತ, ಡ್ರೈವರ್ ಇದ್ದಾರೆ. ಅಲ್ಲಿನ ಕಛೇರಿಗೆ ಬೇಕಾಗಿರುವ ವ್ಯವಸ್ಥೆ ಇಲ್ಲ. ಈ ವರ್ಷದಲ್ಲಿ ಆ ಸಹಾಯಕ ನಿರ್ದೇಶಕರು ನಿವೃತ್ತಿಯಾಗುತ್ತಾರೆ. ಖಾತಾದಾರರು ನಮ್ಮ ಇನ್‌ಸೆನ್‌ಟೀವ್ ಬಡ್ಡಿಯನ್ನು ತಕ್ಷಣ ಕೊಡಬೇಕೆಂದು ಸರ್ಕಾರದವರಲ್ಲಿ ಕೇಳುತ್ತಿದ್ದಾರೆ. ಒಂದು ತಿಂಗಳಿನಲ್ಲಿ ಅದನ್ನು ಕೊಡಬೇಕು, ಆದರೆ ಎರಡು ವರ್ಷಗಳಾದರೂ ಕೊಟ್ಟಿಲ್ಲ. ಆದ್ದರಿಂದ ತಕ್ಷಣ ಅದನ್ನು ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಇದಕ್ಕೆ ಯಾರು ಉತ್ತರ ಹೇಳುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಸದಸ್ಯರು ಏನು ಹೇಳಿದ್ದಾರೆಂದು ಯಾರಾದರೂ ಒಬ್ಬರಿಗೆ ಗೊತ್ತಿದೆಯಾ ಕೇಳಿ? ಅವರೇನು ಹೇಳಿದರು ಎಂಬುದನ್ನು ಯಾರಾದರೂ ಒಬ್ಬರು ಹೇಳಿಬಿಟ್ಟರೆ ತೃಪ್ತಿಯಾಗುತ್ತದೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಯವರು): ಯಾವ್ಯಾವುದೋ ಭಾಷೆಯನ್ನು ಬಳಸಲು ಆಗುತ್ತದೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ: ಸುಮ್ಮಸುಮ್ಮನೆ ಕುಳಿತಿದ್ದು ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳಿಸಿಕೊಳ್ಳದಿದ್ದರೆ ಇನ್ಯಾವ ಭಾಷೆಯನ್ನು ಬಳಸಬೇಕು? ಶಾಸಕರು ಪ್ರಶ್ನೆ ಮಾಡುತ್ತಿದ್ದರೆ ಇಷ್ಟೊಂದು ಮಂತ್ರಿಗಳು ಇದ್ದು ಕೇಳಿಸಿಕೊಳ್ಳದಿದ್ದರೆ ತಾವು ನಿದ್ದೆ ಮಾಡುತ್ತಿದ್ದೀರಾ ಎಂದು ಕೇಳದೆ ಮತ್ತೇನು ಕೇಳಬೇಕು? ಯಾವ ಭಾಷೆಯನ್ನು ಬಳಸಬೇಕು ನೀವೇ ಹೇಳಿ?

ಶ್ರೀ ಸಿದ್ಧರಾಮಯ್ಯ: ಮಾಹಿತಿಯನ್ನು ತರಿಸಿ ಹೇಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಇದೊಂದೇ ಅಲ್ಲ, ಸರ್ಕಾರ ಈ ರೀತಿಯಾದರೆ ನಾವು ಸರ್ಕಾರವನ್ನು ಏನೆಂದು ಕರೆಯಬೇಕು?

ಶ್ರೀ ಸಿದ್ಧರಾಮಯ್ಯ: ಸರ್ಕಾರವಿದೆಯೆಂದು ಹೇಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ತಾವು ಹೇಳಿಕೊಳ್ಳಬೇಕಷ್ಟೆ, ನಾನು ಸರ್ಕಾರ ಸತ್ತಿದೆಯೆಂದು

ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ: ಸರ್ಕಾರ ಸತ್ತಿದ್ದರೆ ನಾವು ನೀವು ಇಲ್ಲಿ ಕುಳಿತುಕೊಳ್ಳುತ್ತಲೇ ಇರಲಿಲ್ಲವಲ್ಲಾ? ಸರ್ಕಾರ ಸುಭದ್ರವಾಗಿರುವುದರಿಂದ ನಾವು ಇಲ್ಲಿ ಕುಳಿತಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಒಬ್ಬರು ಶಾಸಕರಾಗಿ ಪ್ರಶ್ನೆ ಕೇಳುತ್ತಿದ್ದಾರೆ, ರಸ್ತೆಯಲ್ಲಿ ಹೋಗುವ ಯಾರೋ ಬಂದು ಇಲ್ಲಿ ಕೇಳುತ್ತಿಲ್ಲ. ಇದು ಇವತ್ತಿನ ಪ್ರಶ್ನೆಯಲ್ಲ, ಇದರ ಬಗ್ಗೆ ನೂರಾರು ಬಾರಿ ಎಚ್ಚರಿಕೆ ನೀಡಿದ್ದೇವೆ, ತಾವು ಮನಸ್ಸು ನೋವು ಮಾಡಿಕೊಂಡಿದ್ದೀರಿ, ಮಾನ್ಯ ಸದಸ್ಯರ ಪ್ರಶ್ನೆಯೇನು ಎಂಬುದನ್ನು ಕೇಳುವ ಆಸಕ್ತಿ ಇವರಿಗೆ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ತಾವು ತಮ್ಮ ಅಸಮಾಧಾನವನ್ನು ತೀವ್ರವಾಗಿ ವ್ಯಕ್ತಮಾಡಿದ್ದೀರಿ. ಮಾನ್ಯ ಜಯರಾಮಶೆಟ್ಟಿಯವರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ನಾನೇ ಉತ್ತರ ತರಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ನಾವು ಇನ್ನು ಯಾವ ರೀತಿ ಅವರಿಗೆ ಹೇಳಬೇಕು, ಅವರಿಗೆ ಪ್ರಶ್ನೆ ಕೇಳುವ ಆಸಕ್ತಿ ಇಲ್ಲ, ಆ ಸಮಸ್ಯೆ ಪರಿಹಾರ ಮಾಡಲು ವಿಲ್‌ಪವರ್ ಇಲ್ಲ, ಆ ಆಸಕ್ತಿ ಕೂಡ ಇಲ್ಲ.

ಅಧ್ಯಕ್ಷರು: ನಾನು ಉತ್ತರ ತರಿಸಿಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಸಣ್ಣ ಉಳಿತಾಯದ ಖಾತಾದಾರರಿಗೆ ಕಮೀಷನ್ ಕೊಟ್ಟಿಲ್ಲ ಎಂಬುದು ಮಾನ್ಯ ಸದಸ್ಯರ ವಿಚಾರವಾಗಿದೆ. 1996-97 ಮತ್ತು 1997-98ಕ್ಕೆ ಸಂಬಂಧಿಸಿದಂತೆ ಕಮಿಷನನ್ನು ಕೊಟ್ಟಿಲ್ಲ. ಅದಕ್ಕೆ ಈ ವರ್ಷ ಹೆಚ್ಚು ಹಣವನ್ನು ಒದಗಿಸಿಕೊಂಡಿದ್ದೇವೆ. ಈ ವರ್ಷ ಹೋದ ವರ್ಷದ ಕಮೀಷನನ್ನೂ ಕೊಡುತ್ತೇವೆ.

ಛ) ಮಲಪ್ರಭಾ ನದಿಗೆ ಮಹದಾಯಿ ನದಿಯ ನೀರನ್ನು ಹರಿಸುವ ವಿಚಾರದಲ್ಲಿ ಗೋವಾ ಮತ್ತು ಕರ್ನಾಟಕ ಸರ್ಕಾರಗಳೆರಡು ಸೇರಿ ಜಂಟಿಯಾಗಿ ಅಣೆಕಟ್ಟನ್ನು ನಿರ್ಮಾಣ ಮಾಡುವ ವಿಚಾರ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಈ ತಿಂಗಳ 25ರಂದು ಮಹದಾಯಿ ಯೋಜನೆಗೆ ಸಂಬಂಧಪಟ್ಟಂತೆ ಒಂದು ಸಭೆಯಾಗಿದೆ. ಮಲಪ್ರಭಾ ನದಿಗೆ ಮಹದಾಯಿ ನದಿಯ ನೀರನ್ನು ಹರಿಸುವ ವಿಚಾರದಲ್ಲಿ ಗೋವಾ ಮತ್ತು ಕರ್ನಾಟಕ ಸರ್ಕಾರಗಳೆರಡೂ ಸೇರಿ ಜಂಟಿಯಾಗಿ ಅಣೆಕಟ್ಟನ್ನು ನಿರ್ಮಾಣ ಮಾಡುವ ಬಗ್ಗೆ ಸುಮಾರು ಇಪ್ಪತ್ತು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಇದರ ಬಗ್ಗೆ ಅಧ್ಯಯನ